ಎಳೆಗೂಸನ್ನು ಕಾಪಾಡಿಕೊಳ್ಳಲು ಸಾಧ್ಯವೇ ನಾವು? ಆ ಆಯ್ಕೆ ಉಳಿದಿದೆಯೇ?

ಥಟ್ಟನೆ ಗಡಿಯಾರದ ಮುಳ್ಳು ಬದಲಾದಷ್ಟೇ ಸರಳವಾದ ಒಂದು ಹೊರಳುಕೊಳ್ಳುವಿಕೆಯನ್ನು ಈ ಹೊಸ ವರ್ಷ ನಮಗೆ ಬೆರಳಿಟ್ಟು ತೋರಿಸುತ್ತಿರಬಹುದು.

## ಸಂಬಳ-ಶಾಪಿಂಗ್ ಮಾಯಾಜಾಲ

‘ಏನು ಪ್ಲಾನ್ ಅದ ಲೇ ಹೊಸ ವರ್ಷಕ್ಕ?’ ಅಂತ ಕ್ಯಾಲಿಫೋರ್ನಿಯಾದಲ್ಲಿರುವ ನನ್ನ ಜೀವದ ಗೆಳತಿಗೆ ಕೇಳಿದೆ. ಡಿಸೆಂಬರ್ ಕಡೆಯ ವಾರವೇ ಹುಟ್ಟುಹಬ್ಬವನ್ನೂ ಆಚರಿಸಿಕೊಳ್ಳುವ ಅವಳು ತನ್ನ ಹೊಸ ವಜ್ರದುಂಗುರದ ಫೋಟೊ ಕಳಿಸಿದಳು. ಜೊತೆಗೆ ಗಂಡನಿಗಾಗಿ ಕೊಂಡ ‘ಕಾರ್ಟಿಯೇ’ ಎಂಬ ಲಕ್ಷುರಿ ಕಂಪನಿಯ ದುಬಾರಿ ವಾಚು ಬೇರೆ. ಅಷ್ಟ ಅಲ್ಲ. ‘ಕ್ರೂಸ್ ಹೊಂಟೇವಿ. ಕೆರಿಬಿಯನ್’ ಎಂಬ ಉತ್ತರ ಬಂತು. ‘ಸೂಪರ್!’ ಅಂದೆ. ಇನ್ನೇನು ಹೇಳೋದು? ಹೆಚ್ಚು ಮಾತಾಡಿದರೆ ಜಗಳ ಆಗುತ್ತದೆ ಅನ್ನೋದು ಗೊತ್ತು. ಮಾತು ಮುಂದುವರೆಸಿದರೆ, ‘ಕೆಲಸ, ಸಂಬಳ, ಶಾಪಿಂಗ್ ಎಂಬ ವಿಷವರ್ತುಲದಲ್ಲಿ ಸಿಕ್ಕಿ ಸಾಯ್ತಿದೀಯ. ನಿನ್ನ ಸಮಯವನ್ನು ಅವರಿಗೆ ಕೊಟ್ಟು ಅದಕ್ಕೆ ಪ್ರತಿಫಲವಾಗಿ ಪುಡಿಗಾಸನ್ನು ಜೇಬಿಗೆ ತುರುಕಿಕೊಂಡು ಬಂಡವಾಳಶಾಹಿ ವ್ಯವಸ್ಥೆಯ ಭಾಗವಾಗ್ತಿದೀಯ’ ಅಂತ ನಾನೂ, ‘ಆಹಾ, ನೀನು ಸಮಯವನ್ನೆಲ್ಲ ನಿನ್ನ ಹತ್ತಿರವೇ ಉಳಿಸಿಕೊಂಡು ಕಡೆದು ಕಟ್ಟೆ ಹಾಕ್ತಿರೋದು ಏನೂಂತ ಕಾಣ್ತಿದೆ’ ಅಂತ ಅವಳೂ ಈ ಸಂಭಾಷಣೆ ಶುರುವಾದ ಕೆಲವೇ ನಿಮಿಷಗಳಲ್ಲಿ ಕಚ್ಚಾಡತೊಡಗುತ್ತೇವೆ ಪ್ರತಿ ಬಾರಿಯೂ ಎಂಬುದು ಗೊತ್ತಿದೆ.

ನಾನು ಹೊರಿಸುತ್ತಿರುವ ಆರೋಪಗಳು ನನ್ನ ಕುರಿತಾಗಿಯೂ ಇವೆ ಎಂಬ ಅಂತರ್ಗತ ಸತ್ಯ ಇಂದೇಕೋ ನನ್ನನ್ನು ಸುಮ್ಮನಾಗಿಸಿತು. ಆಧುನಿಕತೆಯನ್ನು ಜಾಗತೀಕರಣ ಸೃಷ್ಟಿಸಿದ ಕೂಸು ಎನ್ನುವ ಹಾಗೆ ಕಾಣುತ್ತಿರುವ, ಕಾಣಿಸುತ್ತಿರುವ ಈ ಕುದಿಯುವ ಲೋಹದಂಥ ಕಾಲದಲ್ಲಿ ಮನುಷ್ಯ ಲೋಕದ ಅಂತರಂಗಕ್ಕೆ ಕಾವು ಕೊಡುವ ಸ್ನೇಹ, ಪ್ರೇಮಗಳನ್ನೂ ‘ಅರ್ಥ’ದ ಭಾಷೆಯಲ್ಲೇ ನಮ್ಮದಾಗಿಸಿಕೊಳ್ಳಬೇಕಲ್ಲ ಎಂದು ಕಂಗೆಡುವಂತಾಯಿತು, ಸ್ನೇಹಿತೆಯೊಡನೆ ಮಾತನಾಡಿ ಫೋನಿಟ್ಟ ನಂತರ.

## ಸೇಡಿನ ಪ್ರವಾಸ, ರಿವೆಂಜ್ ಶಾಪಿಂಗ್

ಕಳೆದ ನಾಲ್ಕು ವರ್ಷಗಳಿಂದ ಜಗತ್ತನ್ನೇ ತಟಸ್ಥವಾಗಿಸಿದ ಕೋವಿಡ್ ಹೊರ ಜಗತ್ತನ್ನಷ್ಟೇ ಅಲ್ಲ, ನಮ್ಮನಮ್ಮ ಒಳಜಗತ್ತನ್ನೂ ನಡುಗಿಸಿಬಿಟ್ಟಿದೆ. ಇನ್ನೂ ಆ ಭೀತಿ ನಮ್ಮ ಹೊರ ಮತ್ತು ಒಳ ವಲಯಗಳಲ್ಲಿ ಪ್ರತಿಧ್ವನಿಸುವುದು ನಿಂತಿಲ್ಲ. ಅಷ್ಟು ಬೇಗ ಅದು ನಿಲ್ಲುವ ಹಾಗೂ ಕಾಣುತ್ತಿಲ್ಲ. ಮೊದಲ ಎರಡು ವರ್ಷಗಳ ಲಾಕ್‌ಡೌನ್ ನಂತರ ಪ್ರಪಂಚದ ಜನರೆಲ್ಲ ಎಷ್ಟು ಕಂಗೆಟ್ಟಿದ್ದರು ಎಂಬುದಕ್ಕೆ ಆ ನಂತರದ ಎರಡು ವರ್ಷಗಳ ಶಾಪಿಂಗ್ ಮತ್ತು ಪ್ರವಾಸದ ಏರಿಕೆಯೇ ಪುರಾವೆ ಒದಗಿಸುತ್ತದೆ. ಇದಕ್ಕೆ ‘ರಿವೆಂಜ್ ಶಾಪಿಂಗ್’ ಮತ್ತು ‘ರಿವೆಂಜ್ ಟ್ರಾವೆಲಿಂಗ್’ ಎಂದು ಹೆಸರಿದೆ. ಎರಡು ವರ್ಷ ಏನನ್ನೂ ಮಾಡಲಾಗಿಲ್ಲ ಎಂದು ಸೇಡಿಗೆ ಬಿದ್ದು ಹಣ ಖರ್ಚು ಮಾಡಿರುವುದು ಇದು. ಅಂದರೆ ಎರಡು ವರ್ಷ ಮಾಡದಿರೋದನ್ನೆಲ್ಲ ಮುಂದಿನ ಎರಡು ವರ್ಷಗಳಲ್ಲಿ ದುಪ್ಪಟ್ಟು




## ಸಂಗೀತ ಕಲಿಕೆ, ಸಾಧನೆ

ಕಲಾವಿದರ ಸಂಖ್ಯೆ ಹೆಚ್ಚುತ್ತಿದೆ. ಅವಕಾಶಗಳೂ ಸಿಗುತ್ತಿವೆ. ಆದರೆ ಯುವ ಗಾಯಕ–ಗಾಯಕಿಯರ ಹಾಡುಗಾರಿಕೆ, ನುಡಿಸಾಣಿಕೆ ನೋಡಿದರೆ ಗುಣಮಟ್ಟದ ಕೊರತೆ ಎದ್ದು ಕಾಣುತ್ತಿದೆ. ಮಕ್ಕಳು ಕಲಿಕೆ ಕಡೆಗೆ ಹೆಚ್ಚಿನ ಗಮನ ಕೊಡಬೇಕೇ ಹೊರತು ಪ್ರಚಾರ, ಎಕ್ಸ್‌ಪೋಷರ್ ಕಡೆಗೆ ಅಲ್ಲ. ನಾವೀಗ ಸಂಗೀತ, ನೃತ್ಯ, ನಾಟಕ ಮುಂತಾದ ಲಲಿತಕಲೆಗಳ ಕುರಿತಾದ ರಿಯಾಲಿಟಿ ಶೋಗಳನ್ನು ನೋಡುತ್ತಿದ್ದರೆ ಅಲ್ಲಿ ಪ್ರತಿಭೆಗಳನ್ನು ಕಾಣ್ತೇವಿ. ಆದರೆ ಇವರಲ್ಲಿ ಸಾಧನೆ, ಪರಿಶ್ರಮ ಪಡುವವರ ಸಂಖ್ಯೆ ಬಹಳ ಕಡಿಮೆ ಅನಿಸ್ತಾ ಇದೆ. ಜನಪ್ರಿಯತೆಗಾಗಿ ಬರುವ ಮಕ್ಕಳ ಸಂಖ್ಯೆಯೇ ಹೆಚ್ಚು, ಇದಕ್ಕೆ ಪೋಷಕರ ಬೆಂಬಲವೂ ಇದೆ. ಮಕ್ಕಳ, ಪೋಷಕರ ಮನೋಭಾವ ಬದಲಾಗಬೇಕಿದೆ. ಇದು ಹೊಸವರ್ಷದ ಆರಂಭದಿಂದಲೇ ಆದರೆ ಈ ಕ್ಷೇತ್ರ ಸುಧಾರಿಸಲು ಸಾಧ್ಯವಿದೆ.

**-ಲಕ್ಷ್ಮಿ ನಾಗರಾಜ್,** ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ




## ನೆಮ್ಮದಿಯ ಸಮಾಜ

ಸಮಾಜದಲ್ಲಿ ದುಡ್ಡಿರುವವರು ಇಲ್ಲದವರು ಎಂಬ ವಿಭಜನೆ ಎಂದಿಗೂ ನನ್ನ ಮನಸ್ಸನ್ನು ಕಾಡುವಂಥದ್ದು. ಆ ವಿಭಜನೆಯ ಗೆರೆ ಕೊಂಚವಾದರೂ ಮಾಸಬೇಕು. ನೂರಾರು ವರ್ಷಗಳಿಂದಲೂ ಅಸಮಾನತೆ ಎಂಬುದು ಇದ್ದೇ ಇದೆ. ಆ ಅಂತರ ಕಡಿಮೆ ಆಗಬೇಕು. ಅಸಮಾನತೆಯೊಂದಿಗೆ, ಧರ್ಮ–ಜಾತಿಯಿಂದಲೂ ದೂರ ಉಳಿಯಬೇಕು. 2023ರಲ್ಲಿ ಸಂಭವಿಸಿದ ಯುದ್ಧಗಳನ್ನು ನೋಡಿದರೆ, ಯುದ್ಧಕ್ಕೆ ಕಾರಣವಾಗುವ ಯಾವುದೇ ಅಂಶವನ್ನು ನಿರ್ಲಕ್ಷ್ಯ ಮಾಡಿ, ನೆಮ್ಮದಿಯ ದಾರಿಯನ್ನು ಕಂಡುಕೊಳ್ಳುವ ತುರ್ತು ಎದುರಿಗಿದೆ. ಧರ್ಮ, ಜಾತಿಯ ಸಂಗತಿಗಳಿಂದ ಮನುಷ್ಯ ದೂರವಿದ್ದಷ್ಟೂ ಸಮಾಜದಲ್ಲಿ ನೆಮ್ಮದಿಯೂ ಹೆಚ್ಚಾಗುತ್ತದೆ. ಈ ಪ್ರಕ್ರಿಯೆ ತುಂಬಾ ಸಮಯ ತೆಗೆದುಕೊಳ್ಳುತ್ತದೆ. ಆದರೂ ನಮ್ಮ ಆಶಯ ಎಂದಿಗೂ ಇದಾಗಿರಬೇಕಿದೆ.

**-ಪೃಥ್ವಿ ಕೊಣನೂರು,** ಸಿನಿಮಾ ನಿರ್ದೇಶಕ



ಮಗುವಿನ ಕೈಯಲ್ಲಿ
ಭರವಸೆಯ
ಉಸಿರು–ಹಸಿರು